Visit of Ministers and Deputy Ministers to Tiptur

8. **Sri G. V. ANJANAPPA** (Graduates' Constituency). —

Will the Chief Minister be pleased to state :—

(*a*) the number of Ministers and Deputy Ministers that visited Tiptur in the month of November, 1967 ;

(*b*) the purpose of their tour ;

(*c*) the object achieved ;

(*d*) the total amount of T.A. and D.A. drawn by each Minister ; (if the same Minister or Deputy Minister visited more than once, details be furnished) ?

A.—**Sri B. D. JATTI** (Minister for Food and Civil Supplies) [on behalf of SRI S. NIJALINGAPPA (Chief Minister)]:—

(*a*) Ministers—6 (Six).
Deputy Minister—1 (One).

(*b*) Private.

(*c*) Does not arise in view of reply to clause (*b*).

(*d*) do

ಶ್ರೀ ಜಿ. ವಿ. ಆಂಜನಪ್ಪ. —ಇಲ್ಲ (ಅ) ಪ್ರಶ್ನೆಗೆ ಉತ್ತರವಾಗಿ ಖಾನಗೀ ಉದ್ದೇಶಕ್ಕಾಗಿ ಎಂದು ಹೇಳಲಾಗಿದೆ. ತಿಪಟೂರಿನಲ್ಲಿ ಮೊನ್ನೆತಾನೆ ನಡೆದ ಉಪಚುನಾವಣೆಯಲ್ಲಿ ಭಾಗವಹಿಸುವುದಕ್ಕಾಗಿ ಅಲ್ಲಿಗೆ ಮಂತ್ರಿಗಳು ಹೋಗಿದ್ದರಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಅಲ್ಲಿಗೆ ಹೋಗಿದ್ದ ಮಂತ್ರಿಗಳು ಖಾನಗೀ ವಿಚಾರಕ್ಕೂ ಹೋಗಿ ಚುನಾವಣೆಯ ಪ್ರಚಾರದಲ್ಲೂ ಭಾಗವಹಿಸಿರಬಹುದು.

ಶ್ರೀ ಜಿ. ವಿ. ಆಂಜನಪ್ಪ.—ಮಂತ್ರಿಗಳಾಗಿರತಕ್ಕವರು ಒಂದು ಪಕ್ಷದ ದೃಷ್ಟಿಯಿಂದ ತಮ್ಮ ಉಮೇದುವಾರರ ಬಗ್ಗೆ ಪ್ರಚಾರ ಮಾಡಲು ಹೋದದ್ದು ಸೌಜನ್ಯ ದೃಷ್ಟಿಯಿಂದ ಅದು ಸರಿಯಾದುದಲ್ಲ ಅಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಪಕ್ಷದ ಪರವಾಗಿ ಪ್ರಚಾರ ಮಾಡಬಹುದು. ಆದರೆ ಆ ಉದ್ದೇಶಕ್ಕಾಗಿ ಟಿ.ಎ. ಮತ್ತು ಡಿ.ಎ.ಗಳನ್ನು ತೆಗೆದುಕೊಳ್ಳಬಾರದು ಅಷ್ಟೆ. ಅಂಥ ವಿಚಾರವನ್ನು ಸೌಜನ್ಯದ ದೃಷ್ಟಿಯಿಂದ ಕೇಳತಕ್ಕದ್ದೂ ಕೂಡ ಸರಿಯಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಖಾನಗಿ ಉದ್ದೇಶಕ್ಕಾಗಿ ಹೋದ ಆರು ಜನ ಮಂತ್ರಿಗಳು ಮತ್ತು ಒಬ್ಬ ಉಪಮಂತ್ರಿಗಳು ಅಲ್ಲ ಸರ್ಕಾರಿ ಕೆಲಸವನ್ನು ಯಾವುದನ್ನೂ ಮಾಡಲಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಖಾನಗಿ ಕೆಲಸಕ್ಕೆ ಹೋದಾಗ್ಗೆ ಸರ್ಕಾರಿ ಕೆಲಸಮಾಡಬಾರದು ಎಂಬುದಾಗಿ ಎಲ್ಲಿಯೂ ಹೇಳಿಲ್ಲ. ಸ್ವಂತ ಕೆಲಸಕ್ಕಾಗಿ ಹೋಗಿ ಸರ್ಕಾರಿ ಕೆಲಸ ಮಾಡಿದರೆ ಅದು ಬಹಳ ಒಳ್ಳೆಯದು.

Sri M. P. L. SASTRY.—Sir, is it not a fact that wherever party system of Government exist in a democratic set-up they do the party work during election time ?

Sri B. D. JATTI.—It is a practice everywhere and the same is followed in our State as well as in other States.

ಶ್ರೀ ಜಿ. ವಿ. ಆಂಜನಪ್ಪ.—ಮಾನ್ಯ ಶ್ರೀ ಶಾಸ್ತ್ರಿಗಳು ಹೇಳಿದ ವಿಚಾರವಾಗಿ ನಾನು ಹೇಳುವುದಾದರೆ, ಇಂಗ್ಲೆಂಡ್ ಕಾಮನ್‌ವೆಲ್ತ್ ಪಾರ್ಲಿಮೆಂಟಿನಲ್ಲಿರುವ ಪಕ್ಷದವರು ಉಪಚುನಾವಣೆ ನಡೆಸುವಾಗ ಅಲ್ಲಿಯ ಪದ್ಧತಿ ಏನಿದೆಯೆಂಬುದನ್ನು ಇವರು ತಿಳಿಯಬೇಕು. ಅಲ್ಲಿ ಸಾರ್ವತ್ರಿಕ ಚುನಾವಣೆ ಬಂದಾಗ್ಗೆ ಒಂದು ತಿಂಗಳ ಮುಂಚೆಯೇ ಅಲ್ಲಿನ ಸರ್ಕಾರ ರಾಜೀನಾಮೆ ಕೊಡಬೇಕೆಂದಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

Sri M. C. NARASIMHAN.—Has it come to the notice of the Government that in a recent case the Supreme Court has made observations that just prior to elections or round about during the elections, no expenditure should be incurred on the constituency as that would mean trying to influence the voters in a particular way ?

Sri B. D. JATTI.—It does not involve any expenditure of the Government.

Sri M. C. NARASIMHAN.—So far a Tiptur bye-election is concerned, was there any expenditure incurred prior to the election or even during the election on the constituency by the departments of Government ?

Sri B. D. JATTI.—If departmental works are to be taken up they are continuously being done. They are not stopped during election or bye-election time.

ಶ್ರೀ ಎಂ. ವಿ. ವೆಂಕಟಪ್ಪ.—ಮಂಡ್ಯಾ ಲೋಕಸಭಾ ಉಪಚುನಾವಣೆಗೆ ಕೇಂದ್ರದಿಂದ ಒಬ್ಬ ಉಪಮಂತ್ರಿಗಳು ಖಾಸಗಿಯಾಗಿ ಬಂದಿದ್ದರೋ ಅಥವಾ ಸರ್ಕಾರದ ಪರವಾಗಿ ಬಂದಿದ್ದರೋ ?

Mr. DEPUTY CHAIRMAN.—That need not be replied.

Sainik School in Bidar District

9. Sri S. G. KHELGI (Local Authorities' Constituency).—

Will the Minister for Education be pleased to state :—

(*a*) whether Government have received any representation to open Sainik School in Bidar District;

(*b*) if so, whether Government assure to open the School at Bidar District.

A.—Sri K. V. SHANKARA GOWDA (Minister for Education).—

(*a*) No.

(*b*) No.

ಶ್ರೀ ಎಸ್. ಜಿ. ಖೆಲ್ಗಿ.—(ಅ) ಪ್ರಶ್ನೆಗೆ ಉತ್ತರವಾಗಿ ಮನವಿಗಳು ಬಂದಿಲ್ಲವೆಂದು ಹೇಳಿದೆ. ನಾನೇ ಮಂತ್ರಿಗಳಿಗೆ ಒಂದು ಕಾಗದ ಬರೆದಿದ್ದಕ್ಕೆ ಉತ್ತರ ಬಂದಿದೆ. ಈಗ ಆ ಉತ್ತರ ಸರಿಯೋ ಅಥವಾ ಈ ಉತ್ತರ ಸರಿಯೋ ?

ಶ್ರೀ ಕೆ. ವಿ. ಶಂಕರಗೌಡ.—ಅದೇನು ಇರಬಹುದೆಂಬುದನ್ನು ವಿಚಾರಮಾಡುತ್ತೇನೆ.